# ನಲ್ಲೂರರ 'ನೀನೆಂಬ ನಾನು' ಕವನ ಸಂಕಲನದ ವಿಭಿನ್ನ ನೆಲೆಗಳು

**ಉಮೇಶ್ ಬಿ. ಆರ್.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಹಾರೋಹಳ್ಳಿ.

**Received: 06/12/2024 ; Accepted: 10/01/2025 ; Published: 02/02/2025**

**DOI: https://doi.org/10.5281/zenodo.14788762**

## ABSTRACT:

ಆಧುನಿಕ ಕನ್ನಡ ಸಾಹಿತಿಗಳಲ್ಲಿ ಆರ್.ಕೆ.ನಲ್ಲೂರು ಪ್ರಸಾದ್‌ರವರು ಒಬ್ಬರು. ಯಾವುದೇ ಒಂದು ಸಾಹಿತ್ಯಿಕ ಪಂಥಕ್ಕೆ ಸೀಮಿತರಾಗದ ಇವರು ಸಮನ್ವಯತೆಯಿಂದ ಕಾವ್ಯ ಕಟ್ಟುತ್ತಿರುವವರು. ಇವರು ಕವಿಯಾಗಿ, ಜಾನಪದ ವಿದ್ವಾಂಸರಾಗಿ, ಕಲಾವಿದರಾಗಿ, ಕನ್ನಡ ಸಾಂಸ್ಕೃತಿಕ ಲೋಕದ ರಾಯಭಾರಿಯಾಗಿ, ವಿಚಾರವಾದಿಯಾಗಿ, ಸಂಸ್ಕೃತಿ ಚಿಂತಕರಾಗಿ, ಲೇಖಕರಾಗಿಯೂ ಗುರುತಿಸಲ್ಪಟ್ಟಿದ್ದಾರೆ. ಸಾಹಿತಿಯಾದವನಿಗೆ ತಾನು ಬದುಕುತ್ತಿರುವ ಸಮಾಜದ ಬಗ್ಗೆ ಸದಾಕಾಲ ಕೃತಜ್ಞತಾ ಭಾವವೇ ಇರುತ್ತದೆ. ಸಮಾಜದ ಪ್ರತಿಯೊಂದು ಆಗು-ಹೋಗುಗಳನ್ನು ಆತ ಸದಾ ತೆರೆದ ಹೃದಯದಿಂದ ಸ್ವೀಕರಿಸಿ, ಅನುಭವಿಸಿ ಅವುಗಳಿಗೆ ಅಭಿವ್ಯಕ್ತಿಸುತ್ತಾ ಬದುಕುತ್ತಾನೆ. ಅವನ ಅಭಿವ್ಯಕ್ತಿಯು ಮೌಖಿಕವಾಗಿ ಇಲ್ಲವೇ ಕಾರ್ಯರೂಪದಲ್ಲಿ ಅಭಿವ್ಯಕ್ತಿಸಲ್ಪಡುತ್ತದೆ. ಸಾಹಿತಿಯು ತಾನು ಕಂಡುಂಡ ಅನೇಕ ಘಟನೆಗಳಿಗೆ ಪ್ರತಿಕ್ರಿಯಿಸುತ್ತಲೇ ಇರುತ್ತಾನಾದರೂ ಆತನ ಕಾವ್ಯ ರಚನೆಗೆ ಪ್ರೇರಣೆ, ಪ್ರಭಾವಗಳಿರುವುದನ್ನು ಅಲ್ಲಗಳೆಯಲಾಗದು. ಈ ನಿಟ್ಟಿನಲ್ಲಿ ನಲ್ಲೂರರು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿರುವ 'ದಗ್ಧ, ಸೋನೆ ಮುಗಿಲು, ನೀನೆಂಬ ನಾನು, ರೆಕ್ಕೆ ಬಡಿಯುವ ಮುನ್ನ ಹಾಗೂ ನಿವೃತ್ತೋಪನಿಷತ್ತು' ಎಂಬ ಕವನ ಸಂಕಲನಗಳು ಸಹ ಮುಖ್ಯವಾದವುಗಳಾಗಿವೆ. ಈ ಎಲ್ಲಾ ಕವನ ಸಂಕಲನಗಳಲ್ಲಿ ಕಾವ್ಯ, ಸಮಾಜ, ಸಂಬಂಧಗಳು, ಸಾಹಿತ್ಯ, ಆಧ್ಯಾತ್ಮಿಕ ಹಾಗೂ ಭಾವನಾತ್ಮಕ ವಿಚಾರಗಳ ಒಳನೋಟಗಳನ್ನು ತೆರೆದಿಟ್ಟಿದ್ದಾರೆ. ಪ್ರಸ್ತುತ ಲೇಖನದಲ್ಲಿ ಇವರ ಪ್ರಥಮ ಕವನ ಸಂಕಲನವಾದ 'ನೀನೆಂಬ ನಾನು' ಕೃತಿಯಲ್ಲಿರುವ ಕವನಗಳಲ್ಲಿ ಅಭಿವ್ಯಕ್ತವಾಗಿರುವ ವಿಭಿನ್ನ ನೆಲೆಗಳನ್ನು ಅವಲೋಕಿಸಲಾಗಿದೆ.

## KEYWORDS:

ಧನಾತ್ಮಕ, ಜನಾನುರಾಗಿ, ತುಡಿತ, ಆಧುನಿಕತೆ, ಹೊನ್ನಶೂಲ, ಪ್ರಶ್ನಾರ್ಥಕ, ಮನೋಭಾವ.

“ಕವಿತೆ ಈಗಾಗಲೇ ಮನಸಿನೊಳಗಿದ್ದು ತನಗೆ ಬೇಕಾದ ಪ್ರತಿಬಿಂಬಗಳ ಹೊದ್ದುಕೊಳ್ಳಲು ಹವಣಿಸುತ್ತಿರುತ್ತದೆ. ಈ ಪ್ರತಿಬಿಂಬಗಳು ಕೈಗೆ ಸಿಕ್ಕಾಗ ಫಕ್ಕನೆ ಹೊರಬರುತ್ತದೆ ಅದು ಕೊರೆವ ಚಾಪಲ ಮಳ್ಳಿಮೀನುಗಳ ಹೊರಳಾಟದ ಮಿಂಚಲ್ಲಿ ಇದ್ದಕ್ಕಿದ್ದ ಹಾಗೆ ತನ್ನನ್ನು ಗುರುತಿಸಿಕೊಳ್ಳುತ್ತದೆ. ತನ್ನ ಸ್ವರೂಪ ಕಂಡುಕೊಳ್ಳುತ್ತದೆ. ವಿಚಿತ್ರವೆಂದರೆ ಒಳಗಿದ್ದಾಗ ಖಾಸಗಿಯಾಗಿಯೇ ಕಾಡುವ ಕವಿತೆ ಹೊರಬಂದ ನಂತರ ಮಣ್ಣು, ಗಾಳಿ, ನೀರು, ಆಕಾಶದ ಸ್ಪರ್ಶ ಪಡೆದ ಅದು ಮನುಕುಲದ ಹಾಡಾಗಿ ಮಾರ್ಪಾಡಾಗುತ್ತದೆ. ಹೀಗೆ ಮಾರ್ಪಾಡಾಗುವಲ್ಲಿಯೇ ಅದರ ಸಾರ್ಥಕತೆಯಿದೆ. ಹೀಗಾಗಿ ಕವಿತೆ ಕವಿಯೊಳಗಿಂದಲೇ ಬಂದರೂ ಅದು ಮುಲುಕುವುದು ಮಣ್ಣಿನಿಂದಲೇ. ಬದುಕಿನೊಂದಿಗೆ ಮಾಗಿದ ಕವಿತೆಗೆ ಮೊದಲ ಹಾಗೆ ನುಗ್ಗಿ ಬರುವ ರಭಸವಿಲ್ಲ, ಬದಲಾಗಿ ನಿಯಂತ್ರಣಕ್ಕೆ ಸಿಲುಕಿ ತೊಟ್ಟು ತೊಟ್ಟು ಕಣ್ಣೀರಾಗಿ ಹನಿಯುತ್ತದೆ”[1] ಎಂಬ ಎಚ್.ಎಲ್.ಪುಷ್ಪರವರ ಅಭಿಪ್ರಾಯದ ಹಿನ್ನಲೆಯಲ್ಲಿ ನಲ್ಲೂರರ ಕವನಗಳನ್ನು ಅವಲೋಕಿಸಿದಾಗ, ಕವಿಯಾದವನಲ್ಲಿ ರೂಪುಗೊಳ್ಳುವ ಭಾವನೆಗಳು, ಆ ಭಾವನೆಗಳು ಅಕ್ಷರ ರೂಪವನ್ನು ಪಡೆದು ಕಾವ್ಯ ರೂಪದಲ್ಲಿ ಅಭಿವ್ಯಕ್ತವಾಗುವ ಬಗೆಯನ್ನು ತಮ್ಮ 'ಗಾರುಡಿಗ' ಕವನದ ಮೂಲಕ ಕಟ್ಟಿಕೊಟ್ಟಿರುವುದನ್ನು ಗಮನಿಸಬಹುದು. ಈ ಕವನದಲ್ಲಿ,

**“ಉಂಗುರವು ಇಲ್ಲ ಉಡುಗೊರೆಯು ಇಲ್ಲ**
**ಬರಿದೆ ಮಾತು ಚಿನ್ನ**
**ನಿನಗೇನು ಕೊಡಲಿ ಮತ್ತೇನು ಬಿಡಲಿ**
**ಕೋ....ಬರಿಯ ಕವನವನ್ನ”**[2]

ಎನ್ನುತ್ತಾ, ತಮ್ಮ ಕಲ್ಪನೆಯ ಕಾವ್ಯ ಗಾರುಡಿಗನನ್ನು ನಮ್ಮ ಮುಂದೆ ಇಡುವುದನ್ನು ಕಾಣಬಹುದು. ಆ ಮೂಲಕ ಕಾವ್ಯರಚನೆಯ ಹಿಂದಿನ ಪ್ರೇರಣೆಯನ್ನು ವಿಶ್ಲೇಷಿಸುತ್ತಾರೆ.

ನಲ್ಲೂರರ ಕೌಟುಂಬಿಕ ಬದುಕಿನಲ್ಲಿ ಧನಾತ್ಮಕವಾಗಿ, ಋಣಾತ್ಮಕವಾಗಿ ತೀವ್ರ ಪ್ರಭಾವವನ್ನು ಬೀರಿದವರೆಂದರೆ ಅವರ ತಂದೆಯವರು. ಜನಾನುರಾಗಿಯಾಗಿದ್ದ ನಲ್ಲೂರರ ತಂದೆಯವರು ತಮ್ಮ ಒಳ್ಳೆಯತನದ ಕಾರಣಕ್ಕೊ ಏನೋ ಸಮಾಜದಲ್ಲಿ ಕೆಲವೊಮ್ಮೆ ನಿಂದನೆಗೆ ಗುರಿಯಾಗಿದ್ದರಲ್ಲದೆ, ಸಂಕಷ್ಟಗಳನ್ನು ಎದುರಿಸಿದ್ದರು. ಅಂತಹ ಸನ್ನಿವೇಶಗಳನ್ನು ಹಾಗೂ ತಮ್ಮ ತಂದೆಯವರ ವ್ಯಕ್ತಿತ್ವವನ್ನು ತಮ್ಮ 'ನನ್ನಪ್ಪ' ಎಂಬ ಕವನದ ಮೂಲಕ ನಲ್ಲೂರರು ಮುಂದಿನಂತೆ ಕಟ್ಟಿಕೊಡುತ್ತಾರೆ. ನಲ್ಲೂರರ ಪ್ರಕಾರ, ಅವರ ತಂದೆ, 'ಮನೆಗೆದೆಯಲಾರದ ಸಂಕಟಕ್ಕೆ ಮಾರುಗೆದೆಯಲು ಹೊರಟವರು".[3] ಅಂದರೆ ನಲ್ಲೂರರು ಕಂಡಂತೆ ಇವರ ತಂದೆ ಮನೆಯ ವ್ಯವಹಾರಗಳನ್ನು ನೋಡಿಕೊಂಡು, ಮನೆಯ ಸಂಕಟಗಳಿಗೆ ಪರಿಹಾರ ನೀಡುವ ವ್ಯಕ್ತಿಗಿಂತಲೂ

ಊರಿನವರ ದೃಷ್ಟಿಯಲ್ಲಿ ಒಳ್ಳೆಯವರಾಗಲಿಕ್ಕೆ ಹೋಗಿ ಅನೇಕ ತೊಂದರೆಗಳನ್ನು ತಂದುಕೊಂಡವರು. ಮುಂದುವರಿದು ಸ್ವಾತಂತ್ರ್ಯ ಹೋರಾಟಗಾರರು, ಸಮಾಜಮುಖಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಇವರ ತಂದೆಯವರು ಮನೆಯಲ್ಲಿ ಎಷ್ಟೇ ಕಷ್ಟಗಳಿದ್ದರೂ ಅದನ್ನು ತೋರಿಸಿಕೊಳ್ಳದೆ ಸಮಾಜಕ್ಕೆ ಒಳಿತು ಮಾಡಬೇಕೆನ್ನುವ ತುಡಿತವನ್ನು ಹೊಂದಿದ್ದವರು. ಅದರಲ್ಲೂ ನಮ್ಮ ತಂದೆಯ ವ್ಯಕ್ತಿತ್ವವನ್ನು ಸರಿಯಾಗಿ ಅಳೆದು ತೂಗುವವರು ಎಲ್ಲೋ ಸಾವಿರದಲ್ಲಿ ಒಬ್ಬರು. ಸಮಾಜದ ಜನರಿಗೆ ತಮ್ಮ ಒಳಿತನ್ನು ಬಯಸುವ ನಮ್ಮ ತಂದೆಯಂತವರು ಬೇಕಾಗಿಲ್ಲ. ಬದಲಿಗೆ,

**'ನೋಡುವ ಈ ಜನಕ್ಕೆ ನನ್ನಪ್ಪ ನೂರು ಬಣ್ಣ**
**ಸುರ್ಗಿಮರದ ಸುಗುಣ ಬೇಕಿತ್ತು**
**ಹತ್ತಿ ಕುಣಿದರೂ ಚುಚ್ಚದ ಷಂಡತನ ಬೇಕಿತ್ತು**
**ಮುಗಿಲತ್ತ ಮೈಚಾಚಿ ಮರೆತು ಹುಲ್ಲು ಕಡ್ಡಿಗಳ**
**ಕಲ್ಲು ಮುಳ್ಳುಗಳ**
**ಒಮ್ಮೊಮ್ಮೆ ಮೇಲೇರುವ ಡೊಂಬರ ಗಳವು ಆಗಬೇಕಿತ್ತು**
**ಕಡಿದರುರುಳುವ ಬಾಳೆಯಾಗದೆ**
**ಬಡಿದಾಗ ಬಂಡೆಯಾಗಬೇಕಿತ್ತು'**[4]

ಎನ್ನುತ್ತಾರೆ. ಜೊತೆಗೆ ತಂದೆಯ ಜೊತೆಗೆ ನಿರಂತರ ಸಂಘರ್ಷವನ್ನೇ ಕಂಡ ನಲ್ಲೂರರು ಒಂದು ಹಂತಕ್ಕೆ ತಂದೆ ನನ್ನೊಡನೆ ಇರಬೇಕಿತ್ತು, ಅವರನ್ನು ಅರ್ಥೈಸಿಕೊಳ್ಳಲು ನಾನು ಎಡವಿದ್ದೇನೆ ಎಂಬ ಪಾಪಪ್ರಜ್ಞೆಯನ್ನು ಹೊರಹಾಕುತ್ತಾರೆ.

ನಲ್ಲೂರರು ತಮ್ಮ ಸುತ್ತಲಿನ ಸಮಾಜವನ್ನು ತಮ್ಮ 'ಅಸಂಗತ' ಕವನದ ಮೂಲಕ ವಿಮರ್ಶೆಗೆ ಒಳಪಡಿಸುತ್ತಾರೆ. ಈ ಕವನದಲ್ಲಿ 'ಸುಡು ಬಿಸಿಲಿನಲ್ಲಿ ಬಸ್ಸಿಗಾಗಿ ಕ್ಯೂ ನಿಲ್ಲುವ ಸಾಮಾನ್ಯ ಜನರು ಒಂದು ಕಡೆ, ಬಣ್ಣಬಣ್ಣದ ಕಾರುಗಳಲ್ಲಿ ಸಂಚರಿಸುವ ಉಳ್ಳವರೊಂದು ಕಡೆ, ಜೊಲ್ಲು ಸುರಿಸುತ್ತಾ ಕುಳಿತಿರುವ ನಾಯಿಗಳು, ನಿರಂತರವಾಗಿ ಶ್ರಮದ ಜೀವನವನ್ನು ನಡೆಸುತ್ತಿರುವ ಸಮಾಜದ ಅಂತ್ಯಜರು, ಆಧುನಿಕತೆಯೆಡೆಗೆ ಮುಖಮಾಡಿದ ಸ್ತ್ರೀ ಸಂಕುಲ ಸ್ಕರ್ಟು, ಫ್ಯಾಂಟುಗಳನ್ನು, ತುಂಡುಡುಗೆ ಧರಿಸಿ ನಡೆಯುತ್ತಿದ್ದರೆ, ಅದನ್ನು ನೋಡಿ ಲೊಚಗುಟ್ಟುವ ವಯಸ್ಸಾದವರ ಮನೋಭಾವಗಳನ್ನು ತೀಕ್ಷ್ಣವಾಗಿ ಟೀಕಿಸುತ್ತಾರಲ್ಲದೆ, 'ಜನ ಮರುಳೋ ಜಾತ್ರೆ ಮರುಳೋ ಎದೆಯಲ್ಲೇಕೋ ಕಾದ ಸರಳು'[5] ಎನ್ನುತ್ತಾ ಆಧುನಿಕ ಸಮಾಜದಲ್ಲಿನ ವೈರುಧ್ಯಗಳನ್ನು ಪರಿಚಯಿಸುತ್ತಾರೆ.

ಸಮಾಜದಲ್ಲಿ ತನ್ನಂತೆ ಇರುವ ಮನುಷ್ಯರನ್ನು ನಿಂದಿಸುವುದು, ಆತನ ವ್ಯಕ್ತಿತ್ವಕ್ಕೆ ಗೆರೆ ಹಾಕಿ ಇಂತಿಷ್ಟೇ ಎಂದು ಹಂಗಿಸುವುದನ್ನು ಹೆಚ್ಚಾಗಿ ಕಾಣುತ್ತೇವೆ. ಇದು ಮನುಷ್ಯ ಸಹಜ ಗುಣ ಎಂದು ಭಾಸವಾದರೂ ಇಂತವರ ಸಂಖ್ಯೆ ಅತಿ ಕಡಿಮೆ

ಎಂದೇ ಹೇಳಬಹುದು. ಹಾಗಾಗಿ ನಲ್ಲೂರು ಪ್ರಸಾದರು ಇಂತಹ ಪರರನ್ನು ನಿಂದಿಸುವ, ಒಬ್ಬರ ಮೇಲೆ ಮತ್ತೊಬ್ಬರನ್ನು ಎತ್ತಿಕಟ್ಟಿ ತಮ್ಮ ಬೇಳೆ ಬೇಯಿಸಿಕೊಳ್ಳುವ, ತಮ್ಮ ಕೆಲಸವನ್ನು ಮಾಡಿಸಿಕೊಳ್ಳುವ ಸಲುವಾಗಿ ಇಲ್ಲಸಲ್ಲದ ಗುಣಗಳನ್ನೆಲ್ಲ ಸೇರಿಸಿ ಹೊಗಳಿ ಅಟ್ಟಕ್ಕೇರಿಸುವ ಮನಸ್ಥಿತಿಯ ಜನರನ್ನು ತಮ್ಮ 'ನೀನೆಂಬ ನಾನು' ಕವನದಲ್ಲಿ ವಿಡಂಬಿಸುತ್ತಾರೆ. ಈ ಕವನದಲ್ಲಿ,

**'ನಾಲ್ವರ ನಿಂದಿಸುವುದು**
**ಅವನ ಎಳಕು ಎಳೆಯ ಕಿತ್ತು**
**ಇಷ್ಟೇ ಇವನದು ಎನುವುದು**
**ತೂತು ಮಾಡಿದರೂ**
**ಸೋರದಾಗ**
**ಅಯ್ಯಯ್ಯೋ ಬರಿ ಟೊಳ್ಳು!**
**ಎಂದು ಬಳ್ಳುಹಾಕುವುದು.**
**ಯಪ್ಪ ಆರೋಗ್ಯವ್ರ**
**ಅಂದವನ ಹತ್ತಿಸಿ ಬೆಟ್ಟ**
**ನಡು ಬಗ್ಗಿಸದವನಿಗೆ**
**ಏರಿಸುವಿರಿ ಚಟ್ಟ**
**ಅವನನ್ನೇ ತಂಬಾಕು ಮಾಡಿ ತುಂಬಿ**
**ಹಚ್ಚಿದವರಂತೆ ಸೇದುವಿರಿ ಚುಟ್ಟ'**[6]

ಎನ್ನುವಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಅಮಾಯಕರನ್ನು ಹೊಗಳಿ ಹೊನ್ನಶೂಲಕ್ಕೇರಿಸುವುದನ್ನು ಹಾಗೂ ಸಮಾಜದಲ್ಲಿ ಸಭ್ಯತೆಯ ಮುಖವಾಡ ತೊಟ್ಟಿರುವ, ಮೇಲ್ನೋಟಕ್ಕೆ ಸಂತರಂತೆ ಕಾಣುವ ಆಂತರ್ಯದಲ್ಲಿ ಅತ್ಯಂತ ಕ್ರೂರಿಗಳಾಗಿರುವವರನ್ನು ಖಂಡಿಸುತ್ತಾರೆ.

ಬಾಲ್ಯದಲ್ಲಿನ ನೆನಪುಗಳನ್ನು ರೈಲು ಬಂಡಿಯ ಜೊತೆಗಿನ ಪ್ರಯಾಣಕ್ಕೆ ಹೋಲಿಕೆಯ ಮೂಲಕ ನೆನಪು ಮಾಡಿಕೊಳ್ಳುವ ನಲ್ಲೂರರು, ತಮ್ಮ 'ನೆನಪು– ನಿಲ್ದಾಣ' ಎಂಬ ಕವನದಲ್ಲಿ ರೈಲು ಸಾಗುವಾಗ ಕಾಣುವ ಪರಿಸರವನ್ನು ಕಟ್ಟಿಕೊಡುತ್ತಾರೆ. ಈ ಕವನದ ಮೂಲಕ ರೈಲ್ವೆ ನಿಲ್ದಾಣಗಳಲ್ಲಿ ಹಣಕ್ಕಾಗಿ ನಡೆಯುವ, ನಡೆಸುವ ಅನಾಚಾರಗಳನ್ನು, ವಿಡಂಬನೆಗೆ ಒಳಪಡಿಸುವ ನಲ್ಲೂರರು, 'ಮತ್ತೆಲ್ಲೊ ಕೈ ಮರ ಬಿದ್ದು ಕೆಂಪು ಕಂಡಾಗ ಸದ್ದು ನಿಂತು ಉಲಿವ ಹಕ್ಕಿ ಅರಳಿದ ಆ ಹೂವು ನೆನಪು ಗರ್ಭಸ್ರಾವ'[7] ಎನ್ನುತ್ತಾ ನಿಂತ ನೀರಾಗಿರುವ ಸಮಾಜದಲ್ಲಿ ಮೂಡಬಹುದಾದ ಚಲನಶೀಲತೆ ಹಾಗೂ ಬದುಕಿನ ಪ್ರಯಾಣದಲ್ಲಿ ಎದುರಾಗುವ ಅಡೆತಡೆಗಳನ್ನು ಮೆಟ್ಟಿ ನಿಲ್ಲುವ ಒಲವನ್ನು ವ್ಯಕ್ತಪಡಿಸುತ್ತಾರೆ.

ಪ್ರಸ್ತುತ ಸನ್ನಿವೇಶದಲ್ಲಿ ಇತಿಹಾಸವನ್ನು ತಿರುಚುವ, ತಿರುಚಿದ ಇತಿಹಾಸವನ್ನು

ಜನಸಮುದಾಯದ ಮೇಲೆ ಹೇರುವ ಪ್ರವೃತ್ತಿಗಳು ಹೆಚ್ಚುತ್ತಿವೆ. ಇದನ್ನು ಎಪ್ಪತ್ತರ ದಶಕದಲ್ಲೇ ಗ್ರಹಿಸಿದ್ದ ಕವಿ ನಲ್ಲೂರರು ತಮ್ಮ 'ಇತಿಹಾಸದೊಳಗಣ ಇತಿಹಾಸ' ಎಂಬ ಕವನದಲ್ಲಿ ತಮ್ಮ ಆತಂಕವನ್ನು ವ್ಯಕ್ತಪಡಿಸುತ್ತಾರೆ. ಪುರೋಹಿತಶಾಹಿಯ ಕುತಂತ್ರಗಳನ್ನು ಬಯಲಿಗೆಳೆಯುವ ನಲ್ಲೂರರು, ಕಂಡಕಂಡವರ ಜಾತಕ, ಅವರ ಹೆಂಡಿರ ಮಕ್ಕಳ, ತಂದೆಯ, ತಾಯಿಯ ಹುಟ್ಟು ಸಾವಿನ, ತಿಥಿ, ವಾರ, ನಕ್ಷತ್ರ, ಗಣಕೂಟ, ರಾಶಿ ಕೂಟಗಳನ್ನು ಎಣಿಸುವ ಪುರೋಹಿತರಂತೆ ನಾನಾಗ ಬೇಕು ಎನ್ನುತ್ತಾರೆ. ಮುಂದುವರಿದು,

**'ಎದ್ದಿದ್ದು ಈ ಜಾಗ ಬದುಕಿದ್ದು ಬರಿ ಭೋಗ**
**ಹೊಡೆದ ಲಾಗ ಬಂದರೋಗ**
**ಅಂತ್ಯದ ಯೋಗ**
**ಇವನ್ನೆಲ್ಲಾ ರೂಢಿಸಿ ಬಳಿಯಬೇಕಾಗಿದೆ**
**ತೂತು ಗೋಡೆಗೆ ಬರಿ ಸುಣ್ಣ**
**ಹಳೆಯ ಜಾತಕಕೆ ಹೊಸಬಣ್ಣ**
**ಹಳಸಲುತನದಲ್ಲಿ ಅವರತನ ಹುಡುಕಿ**
**ಹೊಟ್ಟೆ ತೊಳಸಿ ಸಾಕು ಎನಿಸುತ್ತದೆ'**[8]

ಅಂದರೆ, ಕಾಲ ಬದಲಾದಂತೆ ನಮ್ಮ ನಂಬಿಕೆಗಳು, ಆಚಾರ ವಿಚಾರಗಳು ಸಹ ಬದಲಾಗಬೇಕು ಎನ್ನುತ್ತಾರೆ. ಹಾಗೆಯೇ ಅಕ್ಬರ, ಅಶೋಕನ ಸದ್ಗುಣಗಳು, ಮಹಮ್ಮದ್ ಬಿನ್ ತುಘಲಕ್ಕನ ಅನರ್ಥದಿಂದ ಕೂಡಿದ್ದ ಆಡಳಿತವು ನಮಗೆ ದಾರಿ ದೀಪವಾಗಬೇಕು. ಅದಕ್ಕೆ ಬದಲಾಗಿ ಇಂದು ಚರಿತ್ರೆಯನ್ನು ಸಂಕುಚಿತಾರ್ಥದಲ್ಲಿ ಗ್ರಹಿಸಿಕೊಳ್ಳುವ ಮೂಲಕ ತಿರುಚಲಾಗುತ್ತಿದೆ ಎಂದು 'ಗತಕಾಲದ ಗುಹೆಯಲ್ಲಿ ಕಾಣದಾಗಿದೆ ದಾರಿ' ಎಂದು ಆತಂಕವನ್ನು ವ್ಯಕ್ತಪಡಿಸುತ್ತಾರೆ.

ನಲ್ಲೂರರ ಬಹುತೇಕ ಕವನಗಳು ಪ್ರೀತಿ, ಪ್ರೇಮ, ವೈರಾಗ್ಯ, ಪ್ರಣಯದ ಸುತ್ತಲೇ ರಚಿಸಲ್ಪಟ್ಟಿವೆ. ಅಂದಿನ ಅವರ ವಯೋಸಹಜ ಆಸೆ ಆಕಾಂಕ್ಷೆಗಳು ಕವನಗಳಾಗಿ ಹೊರ ಬಂದಿರುವುದರಲ್ಲಿ ತಪ್ಪೇನಿಲ್ಲ. ಇವರ 'ನಿನ್ನನ್ನು ಕುರಿತು' ಎಂಬ ಕವನದಲ್ಲಿ ತಮ್ಮ ಕನಸಿನ ಗೆಳತಿಯನ್ನು ವೈವಿಧ್ಯಮಯವಾಗಿ ಮುಂದಿನಂತೆ ವರ್ಣಿಸುತ್ತಾರೆ.

**'ನೀ ನಿಂತ ಆ ಮಾಟ ಹೃದಯವನಿರಿಯುವ ನೋಟ**
**ನನ್ನೆದೆಯೊಳು ಕೆತ್ತಿತ್ತು ಭಿತ್ತಿ ಚಿತ್ರ**
**ಚಿತ್ರವೆಲ್ಲವು ಹರಿದು ಜೊತೆಗೆ ನೀನು ಸರಿದು**
**ಉಳಿದದ್ದು ಅಂತ್ಯದಲಿ ನೋವು ಮಾತ್ರ'**[9]

ಎಂದು ತಮ್ಮ ನೋವನ್ನು ವ್ಯಕ್ತಪಡಿಸುವ ಕವಿ, ಮುಂದುವರಿದು ಇದೇ

ಕವನದಲ್ಲಿ, ನೆನಪುಗಳನ್ನು ಹತ್ತಿಕ್ಕಿ, ಅವುಗಳ ಜಾಗದಲ್ಲಿ ಹೊಸ ನೆನಪುಗಳನ್ನು ಗೀಚಿಯೋ, ಬರೆದೋ ಬದುಕುವುದು ತರವಲ್ಲ. ನನ್ನ ನಿನ್ನ ನಡುವೆ ಇದ್ದ ಸಂಬಂಧದ ನೆನಪುಗಳು ಮಾಡುತ್ತಿರುವ ದಾಳಿಯಿಂದ ಮೊದಲೇ ನೊಂಡಿರುವ ನನಗೆ ಈ ಜೀವನವೇ ಸಹ್ಯವೆನಿಸುತ್ತಿಲ್ಲ ಎಂದು ತಮ್ಮ ಮನದಲ್ಲಡಗಿದ ದುಗುಡವನ್ನು ಹೊರಹಾಕುತ್ತಾರೆ.

ಹಾಗೆಯೇ ಇವರ 'ಏನು ಮಾಡಿ ಬಿಟ್ಟೆಯೆ ನನ್ನ' ಎಂಬ ಕವನವು ಸಹ ತಮ್ಮ ಮನದಾಳದ ನಲ್ಲೆಯಲ್ಲಿ ಭಿನ್ನವಿಸಿಕೊಳ್ಳುವ ಬಗೆಯನ್ನು ನಮ್ಮ ಮುಂದೆ ಇಡುತ್ತದೆ. ಈ ಕಾವ್ಯದಲ್ಲಿ,

**'ಬಿಸಿಲು ಬೆಂಕಿಯ ನಡುವೆ ಹಸಿಹಸಿಯ ಅನುಭವವ**
**ಹರವಾಗಿ ಬಿಚ್ಚಿಸುತ ಕುಳಿತು ಬಿಟ್ಟೆ**
**ಧಗೆಯತ್ತಿ ಬಿಸಿಯುಸಿರು ಬಿಟ್ಟೆ ನನ್ನಯ ಮನಕೆ**
**ಮಾವು ಹೊಂಗೆಯ ತೋಪು ನೀನಾಗಿ ಬಿಟ್ಟೆ'**[10]

ಎಂದು ತನ್ನ ಮನದನ್ನೆಯನ್ನು ವರ್ಣಿಸುವ ಕವಿ,

**'ಮುತ್ತುಗಳನುದುರಿಸುತ ಮತ್ತೆ ಮೇಲೇರಿಸುತ**
**ಹತ್ತಿರ ಹತ್ತಿರಕೆನ್ನ ಸೆಳೆದುಬಿಟ್ಟೆ**
**ಬಟ್ಟೆಯೂ ನೀನಾಗಿ ಬಯಲು ಬೆಟ್ಟವು ಆಗಿ**
**ಕಟ್ಟಕಡೆಗೆಲ್ಲೋ ನೀ ಸಾಗಿಬಿಟ್ಟೆ'**[11]

ಎಂದು ತಮ್ಮ ಮನದಲ್ಲಡಗಿದ ದುಃಖವನ್ನು ಹೊರಗೆ ಹಾಕುತ್ತಾರೆ.

ಇಂತಹುದೇ ಅಭಿಪ್ರಾಯವನ್ನು ತಮ್ಮ ಮತ್ತೊಂದು ಕವನ 'ಅಂತರ್ದಹನ' ಕವನದ ಮೂಲಕ ಹೊರ ಹಾಕುವ ನಲ್ಲೂರರು,

**'ದೂರದ ಬೆಟ್ಟದ ಬಳಿ ನಿನ್ನ ನಿಟ್ಟುಸಿರು**
**ಇಲ್ಲಿ ನೆನಪಾದಾಗಲೆಲ್ಲ**
**ಪೆನ್ನು-ಪೇಪರು-ಗೀರು**
**ಅಷ್ಟೇ ಅಲ್ಲ ಹೃದಯ ಚೂರು ಚೂರು**
**ಕತ್ತಲು ಹೊಸಗ್ರಹದಲ್ಲೊಬ್ಬಂಟಿ'**[12]

ಅಂದರೆ, ದೂರವಾಗಿರುವ ನಿನ್ನ ನೆನಪಾದಾಗಲೆಲ್ಲ ಬೆಟ್ಟದ ಬಳಿ ಕುಳಿತು ಪೆನ್ನು ಪೇಪರಿನಿಂದ ಮನದಲ್ಲಡಗಿದ ನೋವು, ನಿಟ್ಟುಸಿರಿನಿಂದ ಅನಿಸಿದ್ದನ್ನು ಗೀಚುತ್ತಿರುತ್ತೇನೆ. ಕತ್ತಲು ಕವಿದಿರುವ ಈ ಹೊಸ ಗ್ರಹದಲ್ಲಿ ಒಂಟಿಯಾಗಿರುವ ನನ್ನ ಹೃದಯ ಚೂರು ಚೂರಾಗಿರುವ ಬಗೆಯನ್ನು ಹೇಗೆ ಹೇಳಲಿ ಎಂದು ಅಭಿಪ್ರಾಯಪಡುತ್ತಾರೆ.

ಹಾಗೆಯೇ ನಲ್ಲೂರರ ಮತ್ತೊಂದು ಕವನ 'ನನ್ನ ಹೂವು' ಎಂಬುದರಲ್ಲಿಯೂ ಸಹ ತಮ್ಮ ಮನದನ್ನೆಯನ್ನು ಹೂವಿಗೆ ಹೋಲಿಸಿ ಆ ಮೂಲಕ ತಮ್ಮ ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ನಲ್ಲೂರರು, ನನ್ನ ಇರುವಿಕೆಗಿಂತ ನಿನ್ನ ನೆನಪುಗಳು, ಇರುವಿಕೆಯು ನನ್ನಲ್ಲಿ ಅತಿಯಾಗಿ ಕಾಡುತ್ತಿದೆ. ಮೊದಲ ಬಾರಿ ನಿನ್ನ ಕಂಡಾಗ ಹಸಿರೇ ಹಾಸಿಗೆಯಾಗಿ, ಈ ಆಗಸವೇ ಮಸುಕಾಗಿ ಧರೆಗಿಳಿದು ಬರುತ್ತಿದ್ದ ದೇವಿಯಂತಿದ್ದೆ. ಅದನ್ನು ಕಂಡ ನಾನು ಒಂದು ಕ್ಷಣ ಬೆಪ್ಪಾಗಿ ಆ ಸೌಂದರ್ಯದ ಸವಿಯನ್ನು ಉಣ್ಣುತ್ತಿದ್ದೆ ಎನ್ನುತ್ತಾರೆ. ಮುಂದುವರಿದು,

**'ಬಾಳವನದಲಿ ನಾವು ಸಂಧಿಸಿದ ಸವಿನೆನಪು**
**ಕ್ಷಣಿಕವಾದರು ಅಮರ ಅದುವೆ ಹೂವೆ**
**ವನಬಿಟ್ಟು ಹೊರಟರೂ ಮನದಲ್ಲಿ ನೀ ಇರಲು**
**ಗಗನ ಕುಸುಮವು ಆಯ್ತು ಈ ನನ್ನ ಒಲವು'**[13]

ಎನ್ನುತ್ತಾ ತಮ್ಮಿಂದ ದೂರಾದ ಪ್ರೇಯಸಿಯನ್ನು ನೆನೆಯುತ್ತಾರೆ. ಇಂತಹುದೇ ಭಾವನೆಗಳನ್ನು ತಮ್ಮ 'ಕರೆ' ಕವನದ ಮೂಲಕ ವ್ಯಕ್ತಪಡಿಸುವ ನಲ್ಲೂರರು ತಮ್ಮ ಪ್ರಿಯೆಯನ್ನು ಕುರಿತು, 'ಓಗೊಡು ಮನದನ್ನೆ ಬಳಸಿಬಿಡು ಬಾ ನನ್ನನ್ನೇ ನಿನ್ನ ನೆನಪು ಹಾರವಲ್ಲ ಭಾರ ಹೆಣಭಾರ'[14] ಎಂದು ಕರೆಯುತ್ತಾರೆ. ಮುಂದುವರಿದು, ನಮ್ಮಿಬ್ಬರ ಸಂಬಂಧವನ್ನು ಕಂಡು ಅಣಕಿಸುವವರಿಂದ ನಾನು ಸೋಲುವ ಮೊದಲೇ ನೀನು ಬಾ. ಬಂದು ನನ್ನನ್ನು ಬಿಗಿದಪ್ಪು. ಹಣ್ಣಿನ ರುಚಿಯನ್ನು ಪರೀಕ್ಷಿಸಲು ಆ ಹಣ್ಣಿನ ಬೀಜವನ್ನು ಪರೀಕ್ಷಿಸಲು ಅದರ ಹೊಟ್ಟೆಯನ್ನು ಸೀಳ ಬೇಕೇ? ನಿನ್ನ ಬರುವಿಕೆಗಾಗಿ ತಪಿಸುತ್ತಿರುವ ನನ್ನ ಮನಸ್ಸು ಗಿಡದಂತೆ ಬಾಡುತ್ತಿದೆ. ಆ ಬಾಡುತ್ತಿರುವ ಗಿಡಕ್ಕೆ ನೀನು ನೀರನ್ನು ಹಾಕು. ನಿನ್ನ ನೆನಪುಗಳು ಸಾವಿರ ಬಾಣಗಳಾಗಿ ನನ್ನನ್ನು ಚುಚ್ಚುತ್ತಿರುವ ಕಾರಣದಿಂದ ರಕ್ತ ಸುರಿಯುತ್ತಿದೆ. ಆದುದರಿಂದ ಬಹುಬೇಗ ಬಂದು ನನ್ನನ್ನು ಪ್ರೀತಿಯಿಂದ ತಬ್ಬು ಎಂದು ಆಹ್ವಾನಿಸುತ್ತಾರೆ.

ವಯೋಸಹಜ ಮನೋಕಾಮನೆಗಳನ್ನು ತಮ್ಮ 'ಕನಸು' ಕವನದ ಮೂಲಕ ಅಭಿವ್ಯಕ್ತಿಸುವ ನಲ್ಲೂರರು ತಮ್ಮ ಕನ್ಯೆಯನ್ನು(ರತಿಯನ್ನು) ಕನಸಿನ ರೂಪದಲ್ಲಿ ಭಾವಿಸಿಕೊಂಡು,

**'ನಿನ್ನ ರೂಪವನೇ ಕಣ್ಣು ತೂಗಿ**
**ಹೃದಯ ನಿನ್ನತ್ತ ಬಾಗಿ**
**ನನ್ನದೆಲ್ಲ ನಿನ್ನದಾಗುವಾಗ**
**ಲೇಖನಿ ಮುತ್ತು ಕೊಡುತ್ತದೆ**
**ಬಿಳಿಯ ಹಾಳೆಗಳ ಮೈಗೆ'**[15]

ಎಂದು ಆಕೆಯನ್ನು ನೆನಪು ಮಾಡಿಕೊಳ್ಳುತ್ತಾರೆ. ಆದರೆ ಅದು ನನಸಲ್ಲ,

ಕನಸು ಎಂದು ತಿಳಿದು, 'ನಿನ್ನುದ್ದ ಬೆಳೆದು ನಿನ್ನದೆಲ್ಲವ ಅಳೆದು ದಳದಳವನ್ನೆಲ್ಲ ಎಣಿಸಿ ಮುಡಿಗೇರಿಸಿಕೊಳ್ಳಬೇಕೆನಿಸಿ ಕೈಚಾಚಿದರೂ ಅದೆಲ್ಲ ಕನಸಾಗುತ್ತದೆ' ಎಂದು ಬೇಸರಪಟ್ಟುಕೊಳ್ಳುವುದನ್ನು ಕಾಣಬಹುದು.

ಬದುಕಿನಲ್ಲಿ ಎಲ್ಲವೂ ಇದ್ದು, ಎಲ್ಲರೂ ಇದ್ದು ಕೆಲವೊಮ್ಮೆ ಆಂತರ್ಯದಲ್ಲಿ ಒಂಟಿಯಾಗಿ ಜೀವಿಸುವ ಮನೋಧರ್ಮವನ್ನು ತಮ್ಮ 'ಒಂಟಿ' ಕವನದ ಮೂಲಕ ಅಭಿವ್ಯಕ್ತಗೊಳಿಸುವ ನಲ್ಲೂರರು, ತಮ್ಮ ತನವನ್ನು ಪಕ್ಕಕ್ಕಿಟ್ಟು ಬೇರೆಯವರನ್ನು ಮೆಚ್ಚಿಸಲು ದಿನವನ್ನು ದೂಡುವ, ನೀವೇ ಸರಿ ಎಂದು ಸಲಾಮು ಹೊಡೆಯುವ ಮನಸ್ಥಿತಿಯನ್ನು ವಿಮರ್ಶೆಗೆ ಒಳಪಡಿಸುತ್ತಾರೆ. ಇಷ್ಟೆಲ್ಲಾ ಮಾಡಿದರೂ ಅದರಲ್ಲಿ ಯಾವುದೇ ನೆಮ್ಮದಿಯನ್ನು ಕಾಣಲಾರದ ಕವಿ,

**'ಅಂತೂ ಸಾಯಲಾರದ ಸಂಕಷ್ಟಕ್ಕೊ**
**ಸವಿಕ್ಷಣದ ಆಗಮನಕ್ಕೊ**
**ನಿರೀಕ್ಷಿಸಿ ಬೆದೆಹತ್ತಿ**
**ಬದುಕುತ್ತಿದ್ದೇನೆ ಸ್ವಾಮಿ**
**ನಾನೊಂಟಿ'**[16]

ಎನ್ನುತ್ತಾ ತಮ್ಮ ಮನದಾಳದಲ್ಲಿ ಅಡಗಿದ್ದ ಒಂಟಿತನದ ನೋವನ್ನು ಹೊರ ಹಾಕುತ್ತಾರೆ.

ಮುಂದುವರಿದು, ನಲ್ಲೂರರು ತಮ್ಮ 'ಹೃದಯ ಸ್ಮಶಾನ' ಎಂಬ ಕವನದ ಮೂಲಕ ಅವರು ಕಂಡುಂಡ ಬದುಕಿನ ವಿವಿಧ ಮಜಲುಗಳನ್ನು ಪರಿಚಯಿಸುತ್ತಾರೆ. ಈ ಕವನದ ಪ್ರಕಾರ ನಲ್ಲೂರರು,

**'ಶಿಲುಬೆಗೆ ನೇಣುಗಟ್ಟಿಸಿಕೊಂಡು**
**ಅಂಗ ಅಂಗಕ್ಕೆಲ್ಲ ಮೊಳೆ ಜಡಿಸಿಕೊಂಡ ಕ್ರಿಸ್ತ'**[17]

ಮಾತ್ರವಲ್ಲ, 'ತೆವಡೆ ಕಾಲಿಗೆ ಸಿಕ್ಕಿ ಮಣ್ಣು ಮುಕ್ಕಿದ ಅಣ್ಣಿಗದ್ದೆಯ ಎಸಡಿ'. ಜೊತೆಗೆ 'ಇಳೆಯೆಂಬ ಸೂಳೆ'. ಆದುದರಿಂದಲೇ ಎಷ್ಟೆ ಜನ ಮುಟ್ಟಿದರೂ, ಮೆಟ್ಟಿ ನಡೆದರೂ ನೆತ್ತರನ್ನು ಕಾರಿಸಿದರೂ ಬರೀ ನಿಟ್ಟುಸಿರು ಬಿಡುವುದನ್ನು ಬಿಟ್ಟು ಇನ್ನೇನು ಮಾಡಲಾಗದಷ್ಟು ಈ ವ್ಯವಸ್ಥೆಗೆ ಒಗ್ಗಿ ಹೋಗಿದ್ದಾರೆ. ಆದರೂ ರಾಮನಂತಿರುವ ಇವರನ್ನು ಕಾನನದ ಮಧ್ಯದಲಿ ಕಾಮಿನಿಯು ಕೂಗಿದರೂ ಇವರ ಉತ್ತರ ಮೌನ. ಇದಕ್ಕೆ ಕಾರಣ ಹೇಗೆ ಸತ್ಯವನ್ನು ನುಡಿದು ಹರಿಶ್ಚಂದ್ರ ಸ್ಮಶಾನ ಕಾಯಬೇಕಾಯಿತೋ ಹಾಗೆಯೇ ಇವರು ಸಮಾಜದಲ್ಲಿದ್ದೂ ಇಲ್ಲದಂತಹ ಬದುಕನ್ನು ಕಂಡವರು ಎಂಬರ್ಥದಲ್ಲಿ ವ್ಯಾಖ್ಯಾನಿಸುತ್ತಾರೆ.

ಬದುಕಿನ ವಿವಿಧ ಆಯಾಮಗಳನ್ನು ತಮ್ಮ 'ಹದಗೊಂಡ ಬೇವು-ಬೆಲ್ಲ' ಎಂಬ

ಕವನದ ಮೂಲಕ ಕಟ್ಟಿಕೊಡುವ ನಲ್ಲೂರರು ಗ್ರಾಮ್ಯ ಭಾಷೆಯ ಮೂಲಕ ತಾವೇ ಪ್ರಶ್ನೆಗಳನ್ನು ಹಾಕಿಕೊಂಡು ಅದಕ್ಕೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ.

**'ದುಂಬಿ ಹೂವ ಮಕರಂದ ಹೀರಿ**
**ಹಿಡಿದ್ದಾಂಗೆ ತನ್ನ ದಾರಿ**
**ಉಂಡುಟ್ಟು ನೇರ ಇರಬೇಕು ಹ್ಯಾಂಗೆ**
**ಮರೆತೆಲ್ಲಾ ಕಾಡುದಾರಿ?'[18]**

ಎಂದು ಮಾನವ ತಾನು ಬೆಳೆದು ಬಂದ ದಾರಿಯನ್ನು ಸುಲಭವಾಗಿ ಮರೆಯಬಹುದೇ? ಪ್ರಶ್ನಿಸುವ ನಲ್ಲೂರರು, ಒಡಲಲ್ಲಿ ನೋವೆಷ್ಟೇ ಇದ್ದರೂ ಹೊರಗಿನ ಪ್ರಪಂಚಕ್ಕೆ ನಾನು ಚೆನ್ನಾಗಿದ್ದೇನೆ ಎಂದು ತೋರ್ಪಡಿಸಿಕೊಂಡು ಬಾಳುವುದು ಎಷ್ಟು ಸಹಜವಾದುದು ಎಂದು ತಮ್ಮನ್ನೇ ಪ್ರಶ್ನಿಸಿಕೊಳ್ಳುತ್ತಾರೆ.

ಮನುಷ್ಯನ ಬದುಕಿನಲ್ಲಿ ನಡೆಯುವ ಪ್ರತಿಯೊಂದು ಘಟನೆಗೂ ವಿಧಿಯ ಪ್ರೇರಣೆ, ಪ್ರಭಾವವೇ ಕಾರಣ ಎಂಬ ನಂಬಿಕೆಯನ್ನು ಪ್ರಶ್ನಾರ್ಥಕವಾಗಿ ನೋಡುವ ಕವಿ,

**'ವಿಧಿಯಲ್ಲವಿದು ಸುಧೆಯಲ್ಲವಿದು**
**ಹದಗೊಂಡ್ವಾಂಗ ಬೇವು ಬೆಲೆ**
**ಒದೆದ್ವಾಂಗ ಕಷ್ಟ ಆದಾವ ನಷ್ಟ**
**ಹಳಿಯದಿರಣ್ಣ ನೀ ಬರಿಕಲ್ಲ'[19]**

ಎನ್ನುತ್ತಾ, ಬದುಕಿನಲ್ಲಿ ಬರುವ ಕಷ್ಟ ಸುಖಗಳೆಲ್ಲವೂ ಬೇವು ಬೆಲ್ಲದಂತೆ ಹದಗೊಂಡು ಬೆರೆತಾಗ ಕಷ್ಟಗಳು ಕಳೆಯುತ್ತವೆ. ಆ ಮೂಲಕ ಮನುಷ್ಯನ ಬದುಕಿನಲ್ಲಿ ಎದುರಾಗುವ ಕಷ್ಟ ಸುಖ, ಲಾಭ ನಷ್ಟಗಳೆಲ್ಲವೂ ಆತನನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ. ಇವೆಲ್ಲವನ್ನು ಜಯಿಸಿದಾಗ 'ನೀನಾಗ ಬುದ್ದ ನೀನಾಗ ಸಿದ್ದ ನೀನಾಗ ಜಗಕೆ ಬದ್ದ' ಎನ್ನುತ್ತಾರೆ.

ಮನುಷ್ಯನ ಮನಸ್ಸಿನಲ್ಲಿ ಮೂಡುವ ಬಯಕೆಗಳು, ಭಾವನೆಗಳನ್ನು ತಮ್ಮದೇ ಆದ ರೀತಿಯಲ್ಲಿ ತಮ್ಮ 'ಬಯಕೆ' ಕವನದ ಮೂಲಕ ಕಟ್ಟಿಕೊಡುವ ನಲ್ಲೂರರು, ಎಷ್ಟೋ ಬಾರಿ ಮರೆತಿದ್ದ ಬಯಕೆಗಳು ದಡಕ್ಕೆ ತೆರೆಗಳು ಅಪ್ಪಳಿಸುವಂತೆ ಅಪ್ಪಳಿಸಿ ಮತ್ತೆ ನೆನಪು ಮಾಡುತ್ತವೆ. ಮಾತ್ರವಲ್ಲ ಮುದುಡಿ ಹೋಗಿದ್ದ ಆಸೆಯು ಚಳವಳಿ ಹೂಡುವಂತೆ ಮಾಡುತ್ತವೆ ಎನ್ನುತ್ತಾ,

**'ನೋಡಿ ಇವರೆ.. ಸುಳ್ಳಲ್ಲ**
**ಘೀಳಿಡುತಿದೆ ಬಯಕೆ**

**ಒಳಗೆ ಹೊಲಸ ಕೂಪದಲ್ಲಿ**
**ತಳದಲ್ಲಿ ಧವಳದ ಹನಿ**
**ಮುತ್ತಾಗಲು ಮುಕ್ತಿ ಬಯಸುತಿದೆ'[20]**

ಎನ್ನುತ್ತಾ ಬಯಕೆಗಳು ಕಾಲವಲ್ಲದ ಕಾಲದಲ್ಲಿ ಮನಸ್ಸಿನಲ್ಲಿ ಮೂಡಿದಾಗ ಎದುರಾಗುವ ತಲ್ಲಣಗಳನ್ನು ವಿಶ್ಲೇಷಿಸುತ್ತಾರೆ.

ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳಬೇಕಾದರೆ ಆತನ ಸುತ್ತಲಿನ ಪರಿಸರ ಪ್ರಭಾವವನ್ನು ಗಮನಿಸಬೇಕಾಗುತ್ತದೆ. ಒಬ್ಬ ವ್ಯಕ್ತಿ ಸಮಾಜದಲ್ಲಿ ಒಳ್ಳೆಯವನೋ, ಕೆಟ್ಟವನೋ ಎಂದು ಗುರುತಿಸುವಲ್ಲಿ ಆತ ಬೆಳೆದು ಬಂದ ಪರಿಸರದ ಹಿನ್ನೆಲೆಯೂ ಮುಖ್ಯವಾಗುತ್ತದೆ. ಈ ಮನೋಭಾವವನ್ನು ನಲ್ಲೂರರು ತಮ್ಮ 'ಪರಿಸರ–ಹೂವು–ಪಥಿಕ' ಎಂಬ ಕವನದ ಮೂಲಕ ಕಟ್ಟಿಕೊಡುವ ಪ್ರಯತ್ನ ಮಾಡುತ್ತಾರೆ.

**'ಮುಳ್ಳುಗಳ ಕಣ್ಣು ಮುಚ್ಚಾಲೆಯಲಿ**
**ಕೆಂಗುಲಾಬಿಯು ಬಂಧಿ**
**ಮೃದುವಾದ ಮೈದಳಕೆ ಮುಳ್ಳುಗಳ ಬೇಲಿ**
**ಮುಳ್ಳೊ ಮುಳ್ಳು**
**ಚೂಪು ಗಟ್ಟಿತನ ತಗಲುವಿಕೆ ಹಸಿರ ಹರಣ ಜೊತೆಗೆ ಮರಣ'[21]**

ಎನ್ನುತ್ತಾ, ರಸಿಕರ ಮನಸ್ಸನ್ನು ಸೆಳೆಯುವ ಕೆಂಪುಗುಲಾಬಿಯು ಹೇಗೆ ಮುಳ್ಳುಗಳ ನಡುವೆ ಬಂಧಿಯಾಗಿರುವುದೋ ಹಾಗೆಯೇ ವ್ಯಕ್ತಿಯ ವ್ಯಕ್ತಿತ್ವವು ಆತನ ಅಂತರ್ಯದಲ್ಲಿ ಬಂಧಿಯಾಗಿರುತ್ತದೆ. ಮಾತ್ರವಲ್ಲ ಯಾವ ರೀತಿ ಕಾಂಡಕ್ಕೆ ತಾನು ಹೆತ್ತು ಹೊತ್ತು ಸಾಕಿರುವ ಗುಲಾಬಿಯನ್ನು ಕಾಪಿಡುವ ಬಗ್ಗೆ ಚಿಂತೆ ಇರುತ್ತದೋ, ಹಾಗೆಯೇ ಮುಳ್ಳುಗಳ ಮಧ್ಯದಲ್ಲಿ ಹೂವು ಮೌನವಾಗಿದ್ದುಕೊಂಡು ನೋಡುಗರ ಕಣ್ಮನವನ್ನು ಸೆಳೆಯುತ್ತದೆ. ಇದೇ ರೀತಿ ಮನುಷ್ಯನ ವ್ಯಕ್ತಿತ್ವವು ಸಹ ಅಸ್ತಿತ್ವದ ಹುಡುಕಾಟದಲ್ಲಿ, ತನ್ನದೇ ಆದ ಸ್ವಂತಿಕೆಯನ್ನು ಸಮಾಜದ ಮುಂದೆ ಇಡುವ ಬಯಕೆಯಲ್ಲಿ ಸಾಗುತ್ತದೆ. ಹೇಗೆ ಮುಳ್ಳುಗಳ ನಡುವೆ ಇರುವ ಗುಲಾಬಿಯು ಅಂತಿಮವಾಗಿ ಒಬ್ಬರ ಮುಡಿಗೆ ದೇವರ ಪಾದಕ್ಕೆ ಹೂವಾಗುತ್ತದೋ ಹಾಗೆಯೇ ಒಮ್ಮೊಮ್ಮೆ ಬದುಕಿಗೆ ಯಾವುದೇ ಗುರಿ ಇರದಿದ್ದರೂ ನಡೆಯುವ ದಾರಿಯನ್ನು ಸವೆಸಿ ಸಾಗಬೇಕಾಗುತ್ತದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ತಮ್ಮಲ್ಲಿ ಅರ್ಹತೆ ಇಲ್ಲದಿದ್ದರೂ ತಾವುಗಳು ಅರ್ಹರು ಎಂದು ಸಮಾಜದ ಮುಂದೆ ತೋರ್ಪಡಿಸಿಕೊಳ್ಳುವ ಜನರು ಅಂದು ಇದ್ದರು, ಇಂದೂ ಇದ್ದಾರೆ. ಇಂತಹ ಜನರ ಜೊಳ್ಳಿನಂತಹ ವ್ಯಕ್ತಿತ್ವವನ್ನು ತಮ್ಮ 'ಜೊಳ್ಳು' ಕವನದ ಮೂಲಕ ತೀವ್ರವಾಗಿ ವಿಡಂಬನೆಗೊಳಪಡಿಸುವ ನಲ್ಲೂರರು,

**'ಉರುಬಿದರೆ ಉರುಳುವ ನಿನ್ನ ತನವಿಲ್ಲದ**

**ಅವರಿವರು ತುಂಬಿದ ಗಾಳಿಯನ್ನ**
**ನನ್ನದೇ ಉಸಿರೆಂದು ಭ್ರಮಿಸಿ**
**ಉಸುರುವ ಈ ಜೊಳ್ಳೇ**
**ಬದುಕ ಬಯಸಬೇಡವೋ ಕುನ್ನಿ**
**ಇರುವೆಗೇಕೋ ಗಿರಿಯ ಚಿಂತೆ**
**ಕುರಿಗೆ ನರಿಗೆ ಎತ್ತ ಸಂಬಂಧ?'[22]**

ಎನ್ನುತ್ತಾ, ಯಾವತ್ತಿಗೂ ಜೊಳ್ಳು ಹೇಗೆ ಗಟ್ಟಿಯಾದ ಭತ್ತಕ್ಕೆ ಸಮನಾಗುವುದಿಲ್ಲವೋ ಹಾಗೆಯೇ ಕೃತಕತೆಯಿಂದ ಕೂಡಿದ ವ್ಯಕ್ತಿತ್ವಕ್ಕೆ ಸಮಾಜದಲ್ಲಿ ದೀರ್ಘಕಾಲ ಬೆಲೆ ಸಿಗುವುದಿಲ್ಲ ಎಂದು ಅಭಿಪ್ರಾಯಪಡುತ್ತಾರೆ.

ಹಾಗೆಯೇ ಸಮಾಜದಲ್ಲಿ ದೊಡ್ಡವರೆನಿಸಿಕೊಂಡವರ ವ್ಯಕ್ತಿತ್ವವನ್ನು ವಿಡಂಬನೆಗೊಳಪಡಿಸುವ ನಲ್ಲೂರರು ತಮ್ಮ 'ದೊಡ್ಡೊವ್ರು' ಎಂಬ ಕವನದಲ್ಲಿ, ''ಕೂಗು ಕೋಳಿ ಕೂಗ್ಲಿ ಬಿಡಿ ಎಂದರೆ ಇಲ್ಲ ಬಿಡಿ ಅದರ ಮೆಟ್ರೆ ಹಿಡಿ ರಕ್ತ ಕುಡಿ'[23] ಎನ್ನುವ ಹಾಗೂ ಹುಲ್ಲನ್ನು ಮೇಯುವ ಹುಲ್ಲೆ (ಜಿಂಕೆ)ಯನ್ನು ಭಲ್ಲೆ ತೆಗೆದುಕೊಂಡು ತಿವಿ ಎನ್ನುತ್ತಾ ಪ್ರತಿಯೊಂದರಲ್ಲೂ ತಮ್ಮ ದೊಡ್ಡತನವನ್ನು ತೋರುವ ದೊಡ್ಡವನನ್ನು ಖಂಡಿಸುತ್ತಾರೆ. ಜೊತೆಗೆ ಖಾಲಿ ಮಾತಾಡುತ್ತಾ ಕಾಲ ಕಳೆಯುವ ಇಂತಹ ದೊಡ್ಡ ಜನರಿಗೆ ಬಡವರ ಕಷ್ಟ ತಿಳಿಯುವ ಕೆಲಸ ಮಾಡು ಎಂದು ಹೇಳಿದರೆ ಅದನ್ನು ಅಷ್ಟೇ ತಾತ್ಸಾರದಿಂದ ಕಾಣುವ ಸಮಾಜದ ದೊಡ್ಡವರೆನಿಕೊಂಡ ಸಣ್ಣ ಜನರ ಮನೋಧರ್ಮವನ್ನು ವಿಶ್ಲೇಷಿಸುತ್ತಾರೆ.

ಅಂತಿಮವಾಗಿ ನಲ್ಲೂರರ ಒಟ್ಟಾರೆ ಕಾವ್ಯವನ್ನು ವಿಮರ್ಶಿಸಿದ್ದ ಹೆಸರಾಂತ ವಿಮರ್ಶಕರಾದ ಕಿ.ರಂ.ನಾಗರಾಜರವರು ''ಕಾವ್ಯವನ್ನು ಸಹಜವಾಗಿ ನಿರ್ಮಿಸುವವರು, ಪ್ರಜ್ಞಾಪೂರ್ವಕವಾಗಿ ಕಟ್ಟುವವರು, ಕಾವ್ಯವನ್ನು ಹಾಗೂ ಹೀಗೂ ಹೇಗೋ ಕಟ್ಟುತ್ತಲೇ ಬಳಲುತ್ತಿರುವವರು, ಎಂದೆಂದಿಗೂ ಇದ್ದೇ ಇರುತ್ತಾರೆ. ಹಾಗೆ ಇರಲೂ ಬೇಕು. ನಲ್ಲೂರು ಪ್ರಸಾದ್ ಕವಿತೆಗಳನ್ನು ಬರೆಯುತ್ತಾರೆ. ಆದರೆ ಅವರೆಂದೂ 'ಕವಿಭ್ರಮೆ'ಯ ಜಾಲಕ್ಕೆ ಸಿಕ್ಕಿಕೊಂಡವರಲ್ಲ. ಅದು ಅವರಿಗೆ ಬೇಕಾಗಿಯೂ ಇಲ್ಲ. ಕವಿತೆಯ ಗಂಧ-ಗಾಳಿ ಮೂಗು ಕಿವಿಗಳಿಗೆ ತಾಗಲು ತಕ್ಕವಾಗಿದ್ದರೆ ಅದು ಯಾರ ಮರ್ಜಿಯನ್ನು ಹಿಡಿಯ ಬೇಕಿಲ್ಲ. ಇಂಥ ಆಪ್ತ ಕವಿತೆಗಳನ್ನು ಅವರು ನಾಡಿನ ಕಾವ್ಯ ಪರಿಸರದಲ್ಲಿ ತೇಲಿ ಬಿಟ್ಟಿದ್ದಾರೆ. ಹೀಗಾಗಿ ಅವರ ಕವಿತೆಗಳು ಪಿಸುಮಾತಿನ ದನಿಯಂತೆ ಸೂಕ್ಷ್ಮವಾಗಿ ನಮ್ಮನ್ನು ಆವರಿಸುತ್ತದೆ''[24] ಎಂಬ ಅಭಿಪ್ರಾಯವು ನಲ್ಲೂರರ ಕಾವ್ಯದ ವಿಭಿನ್ನ ನೆಲೆಗಳನ್ನು ಅರ್ಥೈಸಿಕೊಳ್ಳಬಹುದಾಗಿದೆ.

ಹೆಸರಾಂತ ವಿಮರ್ಶಕರಾದ ಎಸ್.ಜಿ.ಸಿದ್ದರಾಮಯ್ಯನವರು ನಲ್ಲೂರರ ಒಟ್ಟಾರೆ ಕಾವ್ಯವನ್ನು ಹಾಗೂ ಅವರ ಕಾವ್ಯಗುಣವನ್ನು ಅರ್ಥೈಸುತ್ತಾ, ''ಮಾತು

ಕೃತಿಗಳ ನಡುವಿನ ಹಿಪಾಕ್ರಸಿ ಢಾಳಾಗಿ ತೋರತೊಡಗಿದಂತೆ ಪ್ರಜ್ಞಾವಂತ ಮನಸ್ಸುಗಳು ಮೌನದ ಮರೆಗೆ ಸರಿದವು. ಧ್ಯಾನದ ಅನುಸಂಧಾನದಲ್ಲಿ ಹೊಸ ಮಾರ್ಗದ ಹುಡುಕಾಟಕ್ಕೆ ತುಡಿಯತೊಡಗಿದವು. ಆಧುನಿಕ ಕನ್ನಡ ಕಾವ್ಯದ ಈ ಎಲ್ಲಾ ಬೆಳವಣಿಗೆ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ತಮ್ಮ ವೈಯುಕ್ತಿಕತೆಯನ್ನು ಎಚ್ಚರದಲ್ಲಿ ಕಾಪಾಡಿಕೊಂಡು ಬಂದವರು ನಲ್ಲೂರು ಪ್ರಸಾದ್. ಯಾವುದೇ ಪಂಥ ಸಿದ್ಧಾಂತಗಳ ಆಶಯಗಳನ್ನು ಆರೋಗ್ಯಕರ ಭಾವದಲ್ಲಿ ಸ್ವೀಕರಿಸಿ ಕಾವ್ಯಸಂವೇದನೆಗೆ ಅದನ್ನು ದ್ರವ್ಯವಾಗಿಸಿಕೊಂಡವರು. ಅವರ ಈ ವಿಶೇಷತೆಗೆ ಕಾರಣ ದೊರೆಕಾಳಿಯ ಗುಣಧರ್ಮವೆಂಬ ಅಸ್ಮಿತೆ. ಹಾಗೂ ಬಳಗ ಪ್ರಜ್ಞೆಯ ಭಾವದಲ್ಲಿ ಜೀವಸಂಕುಲವನ್ನು ತಬ್ಬಿಕೊಳ್ಳುವ ಯಜಮಾನ ಮನಸ್ಸು. ತನ್ನದಲ್ಲದ ಸಂಸ್ಕೃತಿಯ ಜೊತೆ ಮುಖಾಮುಖಿಗೆ ತೊಡಗುವುದಕ್ಕಿಂತ ತನ್ನದ್ದರ ಬಗ್ಗೆ ಆಳದ ಶೋಧನೆಗೆ ನಡೆಯುವುದು ಇವರ ಸಂಸ್ಕೃತಿ ಚಿಂತನೆಯ ಕ್ರಮ”[25] ಎಂಬ ಅಭಿಪ್ರಾಯವನ್ನು ಗಮನಿಸಿದಾಗ ನಲ್ಲೂರರು ತಮ್ಮ ಮೊದಲ ಕವನಸಂಕಲನ 'ನೀನೆಂಬ ನಾನು' ವಿನಲ್ಲಿ ತಾವು ಕಂಡುಂಡ, ತಮ್ಮ ಕಣ್ಣಿಗೆ ಗೋಚರವಾದ, ತಮಗೆ ಅನಿಸಿದ ವಸ್ತು ವಿಷಯಗಳನ್ನು ಕಾವ್ಯದ ಆಶಯವಾಗಿ ಬಳಸಿಕೊಂಡು ರಚಿಸಿರುವುದು ಕಂಡುಬರುತ್ತದೆ.

**ಕೊನೆ ಟಿಪ್ಪಣಿಗಳು:**

1. ಚಂದ್ರಪ್ಪ ಎನ್. (ಸಂ), (2010), ನಿಕಷ: ಭೂತದಿಂದ ಭವಿಷ್ಯದೆಡೆಗೆ ಸಾಗಿದ ನಲ್ಲೂರು ಪ್ರಸಾದ್‌ರವರ ಕಾವ್ಯ, ಮುಂಡ ಪ್ರಕಾಶನ, ಬೆಂಗಳೂರು, ಪು.ಸಂ. 31
2. ನಲ್ಲೂರು ಪ್ರಸಾದ್, (1977), ನೀನೆಂಬ ನಾನು, ಕೃಷಿ ಪ್ರಕಾಶನ, ಚನ್ನರಾಯಪಟ್ಟಣ, ಪು.ಸಂ. 20
3. ಅದೇ, ಪು.ಸಂ. 14–15
4. ಅದೇ, ಪು.ಸಂ. 14
5. ಅದೇ, ಪು.ಸಂ. 38
6. ಅದೇ, ಪು.ಸಂ. 3
7. ಅದೇ, ಪು.ಸಂ. 6
8. ಅದೇ, ಪು.ಸಂ. 28
9. ನಲ್ಲೂರು ಪ್ರಸಾದ್, 1977, ಪೂರ್ವೋಕ್ತ, ನಿನ್ನನ್ನು ಕುರಿತು, ಪುಟ.33
10. ಅದೇ, ಪು.ಸಂ. 26
11. ಅದೇ, ಪು.ಸಂ. 27
12. ಅದೇ, ಪು.ಸಂ. 30

13. ಅದೇ, ಪು.ಸಂ. 40
14. ಅದೇ, ಪು.ಸಂ. 43
15. ಅದೇ, ಪು.ಸಂ. 7
16. ಅದೇ, ಪು.ಸಂ. 25
17. ಅದೇ, ಪು.ಸಂ. 35
18. ಅದೇ, ಪು.ಸಂ. 9
19. ಅದೇ, ಪು.ಸಂ. 10
20. ಅದೇ, ಪು.ಸಂ. 32
21. ಅದೇ, ಪು.ಸಂ. 11
22. ಅದೇ, ಪು.ಸಂ. 19
23. ಅದೇ, ಪು.ಸಂ. 21
24. ಚಂದ್ರಪ್ಪ ಎನ್. (ಸಂ), (2010), ನಿಕಷ: ಭೂತದಿಂದ ಭವಿಷ್ಯದೆಡೆಗೆ ಸಾಗಿದ ನಲ್ಲೂರು ಪ್ರಸಾದ್‌ರವರ ಕಾವ್ಯ, ಮುಂಡ ಪ್ರಕಾಶನ, ಬೆಂಗಳೂರು, ಪು.ಸಂ. 85
25. ಅದೇ, ಪು.ಸಂ. 15

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.